**ಓ ಎಸ್ ನಂಃ 267-2022** **ಪಿ ಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 03.04.2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ** ಪ್ರತಿವಾದಿಗಳ ಪರ ಶ್ರೀ ಜಿ ಆರ್ ಹೆಚ್ ವಕೀಲರಿಂದ

ನನ್ನ ತಂದೆಯವರು ಒಟ್ಟು 4 ಜನ ಅಣ್ಣತಮ್ಮಂದಿರು ಅಂದರೆ ಸರಿ. ಅವರೆಂದರೆ ಬರಮಪ್ಪ, ರಾಮಪ್ಪ, ಚೆನ್ನಪ್ಪ ಮತ್ತುಗೂಳಪ್ಪ. ಸದರಿ 4 ಜನ ಅಣ್ಣತಮ್ಮಂದಿರಿಗೆ ಬಗಡೇಗೇರಿ ಗ್ರಾಮದಲ್ಲಿ ಪ್ರತ್ಯೇಕವಾಗಿ ಮನೆ ಮತ್ತು ಹಿತ್ತಲ ಆಸ್ತಿಗಳು ಇವೆ ಅಂದರೆ ಸರಿ. ವಿ ಪಿ ಸಿ ನಂ.204/2 ಆಸ್ತಿಯಲ್ಲಿ ಬರಮಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳು ವಾಸವಾಗಿದ್ದಾರೆ ಅಂದರೆ ಸರಿ. ವಿ ಪಿ ಸಿ ನಂ.204/1 ಆಸ್ತಿಯಲ್ಲಿ ರಾಮಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳು ವಾಸವಾಗಿದ್ದಾರೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಗೂಳಪ್ಪ ಸಹ ಸದರಿ ಮನೆಯಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ವಿ ಪಿ ಸಿ ನಂ.208/3 ಆಸ್ತಿಯಲ್ಲಿ ನಾನು ಮತ್ತು ನನ್ನ ಕುಟುಂಬ ವಾಸವಾಗಿದ್ದಾರೆ ಅಂದರೆ ಸರಿ. ಸದರಿ ಆಸ್ತಿ ನನ್ನ ಹೆಂಡತಿಯ ಹೆಸರಿನಲ್ಲಿದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ದಿಃ15.07.2023 ರ ಪ್ರಮಾಣಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿ ಅದರಲ್ಲಿರುವ ಅಂಶಗಳು ಸರಿ ಇದೆ ಎಂದು ಹೇಳಿದ ಮೇರೆಗೆ ಸದರಿ ದಾಖಲೆಯನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ರಲ್ಲಿರುವ ಆಸ್ತಿಯಲ್ಲಿ ಸರ್ಕಾರದಿಂದ ಸಹಾಯಧನವನ್ನು ಪಡೆದು ನಾನು ಮನೆ ನಿರ್ಮಿಸಿಕೊಂಡಿದ್ದೇನೆ ಅಂದರೆ ಸರಿ. ಸದರಿ ಸಹಾಯಧನವನ್ನು ಬೋಗೆನಾಗರಕೊಪ್ಪ ಪಂಚಾಯಿತಿಯಿಂದ ಪಡೆದುಕೊಂಡಿದ್ದೇನೆ ಅಂದರೆ ಸರಿ. ಸದರಿ ಮನೆಯನ್ನು 4 ವರ್ಷಗಳ ಹಿಂದೆ ಕಟ್ಟಿದ್ದೇನೆ. ಸದರಿ ವಿಪಿಸಿ ನಂ.208/3 ರ ಆಸ್ತಿಯು ಮೂಲತಃ ಹಳೆ ಮನೆ ಮತ್ತು ಹಿತ್ತಲ ಜಾಗ ಅಂದರೆ ಸರಿ.

**ಮುಂದುವರೆದ ಪಾಟೀಸವಾಲುಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**